# VNA182

## ಈ ಲೇಖನದ ವಿಷಯಾನುಕ್ರಮಣಿಕೆ

| | |
|---|---|
| ಅಧ್ಯಾತ್ಮಚೇತಸಾ | 2 |
| ತ್ವದಾಜ್ಞಯಾ | 6 |
| ತ್ವತ್ಪ್ರಸಾದಾತ್ | 8 |
| ತ್ವತ್ಪ್ರೇರಣಯಾ | 11 |

## ಅಧ್ಯಾತ್ಮಚೇತಸಾ

**ಯಸ್ಮಿನ್ ಸರ್ವಾಣಿ ಕರ್ಮಾಣಿ**
**ಸಂನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಯಾತಿ**
**ಪರಂ ಜಯತಿ ಸೋಽಚ್ಯುತಃ ॥**

ಎಂಬ ಶ್ರೀ ಸದಾಚಾರಸ್ಮೃತಿಯ ಮೊದಲ ಶ್ಲೋಕದಲ್ಲಿ **"ನಿರ್ಮಮಃ"** ಎನ್ನುವದಕ್ಕೆ ನಾನು ಸ್ವತಂತ್ರಕರ್ತೃವಲ್ಲ, ಈ ಕರ್ಮಕ್ಕೆ ನಾನು ಸ್ವತಂತ್ರವಾಗಿ ಒಡೆಯನಲ್ಲ ಎಂಬ ಅರ್ಥವನ್ನು ಹಾಗೂ, **"ಕರ್ಮಾಣಿ ಸಂನ್ಯಸ್ಯ"** ಎನ್ನುವದಕ್ಕೆ ಶ್ರೀಹರಿಯೇ ಸ್ವತಂತ್ರ ಕರ್ತಾ, ದೇವತೆಗಳ ಮುಖಾಂತರ ಅವನೇ ನಮ್ಮಿಂದ ಕರ್ಮಗಳನ್ನು ಮಾಡಿಸುತ್ತಾನೆ, ಈ ಕರ್ಮಗಳು ಪರಮಾತ್ಮನ ಅಧೀನ ಹಾಗೂ ಮಾಡಿದ ಈ ಸತ್ಕರ್ಮಗಳು ಪರಮಾತ್ಮನ ಪೂಜಾರೂಪವಾದದ್ದು ಎಂಬ

ಅರ್ಥವನ್ನು ಹಿಂದಿನ ಲೇಖನ ಮತ್ತು ಉಪನ್ಯಾಸಗಳಲ್ಲಿ ತಿಳಿದೆವು.

ಹಾಗೆಯೇ, **“ಸರ್ವಾಣಿ”** ಎನ್ನುವ ಶಬ್ದದಿಂದ, ನಮಗೆ ವಿಹಿತವಾದ ಸಕಲ ಕರ್ಮಗಳನ್ನೂ ಮಾಡಬೇಕು, ಕಷ್ಟವಾದ ಕರ್ಮದಲ್ಲಿ ಪರಮಾತ್ಮ ನಮ್ಮನ್ನು ನಿಯೋಗಿಸುತ್ತಿದ್ದಾನೆ ಎಂದು ಅವನನ್ನು ದೂಷಿಸದೇ, ಈ ಕರ್ಮದಿಂದ ಮನಸ್ಸಿನ ಶುದ್ಧಿ ದೊರೆತು ಪರಮಾತ್ಮ ನಮಗೆ ಗೋಚರನಾಗುತ್ತಾನೆ ಎಂಬ ಪೂರ್ಣ ವಿಶ್ವಾಸದಿಂದ ಕರ್ಮಗಳ ಆಚರಣೆಯನ್ನು ಮಾಡಬೇಕು ಎನ್ನುವದನ್ನು ತಿಳಿದೆವು.

ಈ ಲೇಖನದಲ್ಲಿ **“ಅಧ್ಯಾತ್ಮಚೇತಸಾ ನಿರಾಶೀಃ”** ಎಂಬ ಎಂಬ ಮಾತಿನಲ್ಲಿನ ಅಧ್ಯಾತ್ಮಚೇತಸಾ ಎಂಬ ಭಾಗವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

ಅಧ್ಯಾತ್ಮಚೇತಸಾ ಎನ್ನುವದಕ್ಕೆ ಆಚಾರ್ಯರ ವ್ಯಾಖ್ಯಾನಗಳ ಅನುಸಾರವಾಗಿ ಶ್ರೀ ವಿದ್ಯಾಧಿರಾಜತೀರ್ಥಶ್ರೀಪಾದಂಗಳವರು ಎರಡು

ಅರ್ಥಗಳನ್ನು ತಿಳಿಸುತ್ತಾರೆ. ಶ್ರೀ ರಾಘವೇಂದ್ರಸ್ವಾಮಿಗಳು ಈ ಎರಡೂ ಅರ್ಥಗಳನ್ನು ತಮ್ಮ ಪ್ರಾತಃಸಂಕಲ್ಪಗದ್ಯದಲ್ಲಿ ಸಂಗ್ರಹಿಸಿ ನೀಡುತ್ತಾರೆ.

ಶ್ರೀ ವಿದ್ಯಾಧಿರಾಜಸ್ವಾಮಿಗಳ ವ್ಯಾಖ್ಯಾನವಿದು — **ಆತ್ಮಾನಂ ಮಾಮಧಿಕೃತ್ಯ ಯಚ್ಚೇತಃ, ತತ್ ಅಧ್ಯಾತ್ಮಚೇತಃ। ಸರ್ವಾಧಿಕೇ ಪರಮಾತ್ಮನಿ ಮಯಿ ಚೇತಃ ಇತಿ ವಾ ತೇನ.**

ತಮ್ಮ ಪೂರ್ವಾಚಾರ್ಯರಾದ ಶ್ರೀ ವಿದ್ಯಾಧಿರಾಜರು ಹೇಳಿದ ಎರಡನೆಯ ಅರ್ಥವನ್ನು ಶ್ರೀ ರಾಘವೇಂದ್ರಸ್ವಾಮಿಗಳು ಹೀಗೆ ವಿವರಿಸುತ್ತಾರೆ — **ಅಧಿ ಅಧಿಕಮ್ । ಸ ಚಾಸಾವಾತ್ಮಾ ಅಧ್ಯಾತ್ಮಾ । ಅಧ್ಯಾತ್ಮನಿ ಚೇತಃ ಅಧ್ಯಾತ್ಮಚೇತಃ ।**

(ಮುಂದೆ ಸಂಸ್ಕೃತಸುರಭಿಯ ಮುಖಾಂತರ ಸಂಸ್ಕೃತವನ್ನು ಕಲಿಯಲು ಸಂಸ್ಕೃತದ ಸಂಸ್ಕಾರ ಆವಶ್ಯಕ. ಹೀಗಾಗಿ, ಈ ವಾಕ್ಯಗಳನ್ನು ಓದಿ ಅಭ್ಯಾಸ ಮಾಡಿ. ಉಪನ್ಯಾಸಗಳಲ್ಲಿ ಇದನ್ನು ಉಲ್ಲೇಖಿಸಿರುತ್ತೇನೆ, ಕೇಳಿಯೂ ಅಭ್ಯಾಸ ಮಾಡಿ)

ಅಧ್ಯಾತ್ಮಚೇತಸಾ ಎನ್ನುವದಕ್ಕೆ ಪರಮಾತ್ಮನಲ್ಲಿ ಅಧಿಕೃತವಾದ ಮನಸ್ಸು, ಪರಮಾತ್ಮನನ್ನು ಸರ್ವೋತ್ತಮನನ್ನಾಗಿ ಚಿಂತಿಸುವ ಮನಸ್ಸು ಎಂದು ಎರಡು ಅರ್ಥಗಳು.

ಪರಮಾತ್ಮನಲ್ಲಿ ಮನಸ್ಸು ಅಧಿಕೃತವಾಗವದು ಎಂದರೆ, ಶ್ರೀಹರಿಯೇ ನನ್ನ ಸ್ವಾಮಿ ಎಂದು ನಿಶ್ಚಯಜ್ಞಾನದಿಂದ ಅಂಗೀಕರಿಸುವದು, ಶ್ರೀಹರಿಯನ್ನು ನೆನೆಯಲು ಯೋಗ್ಯವನ್ನಾಗಿ ಮಾಡುವದು ಮುಂತಾಗಿ ನಮ್ಮ ಪ್ರಾಚೀನ ಆಚಾರ್ಯರು ಅರ್ಥಗಳನ್ನು ಹೇಳಿದ್ದಾರೆ. ಅವೆಲ್ಲವನ್ನೂ ಸಂಗ್ರಹಿಸಿ ಶ್ರೀ ರಾಘವೇಂದ್ರಸ್ವಾಮಿಗಳು ಪ್ರಾತಃಸಂಕಲ್ಪಗದ್ಯದಲ್ಲಿ ಅದ್ಭುತವಾಗಿ ಈ ತತ್ವವನ್ನು ನಿರೂಪಣೆ ಮಾಡುತ್ತಾರೆ —

**ತ್ವದಾಜ್ಞಯಾ ತ್ವತ್ಪ್ರಸಾದಾತ್ ತ್ವತ್ಪ್ರೇರಣಯಾ ತ್ವತ್ಪ್ರೀತ್ಯರ್ಥಂ ತ್ವಾಮುದ್ದಿಶ್ಯ ತ್ವಾಮನುಸ್ಮರನ್ನೇವ**

ನಾವು ಮಾಡುವ ಕರ್ಮವನ್ನು ಮಂಗಳಕರ್ಮಗಳನ್ನಾಗಿ ಮಾಡಿ ನಮ್ಮನ್ನು ಪುನೀತರನ್ನಾಗಿ ಮಾಡುವ ಮಹಾ ಅನುಸಂಧಾನಗಳಿವು.

## ತ್ವದಾಜ್ಞಯಾ

ಕರ್ಮಗಳನ್ನು ಮಾಡಲು ಮನಸ್ಸಿಲ್ಲದ ಜನ ಪ್ರಶ್ನೆ ಕೇಳುತ್ತಾರೆ — ನಾವು ಯಾಕೆ ಕರ್ಮಗಳ ಆಚರಣೆ ಮಾಡಬೇಕು, ಅದಕ್ಕೆ ಕಾರಣ ಕೊಡಿ, ವೈಜ್ಞಾನಿಕ ಕಾರಣ ಕೊಡಿ ಎಂದು.

ಇನ್ನು ಆ ಕರ್ಮಗಳ ಮಹತ್ತ್ವ ಗೊತ್ತಿದ್ದೂ ಮಾಡಲು ಮೂಗು ಮುರಿಯುವ ಜನ ಕೇಳುವ ಪ್ರಶ್ನೆ — ಏನು ಬೆಳಗಿನ ಝಾವ ಎದ್ದರೇ ದೇವರು ಒಲಿಯುತ್ತಾನಾ, ಶಿಖೆ ಬಿಟ್ಟರೇ ದೇವರು ಒಲಿಯುತ್ತಾನಾ, ಸಂಧ್ಯಾವಂದನೆ ಮಾಡಿದರೇ ದೇವರು ಒಲಿಯುತ್ತಾನಾ ಎಂದು.

ಆ ಎಲ್ಲ ಪ್ರಶ್ನೆಗಳಿಗೆ ಶ್ರೀ ರಾಘವೇಂದ್ರಸ್ವಾಮಿಗಳು ನೀಡಿದ ಉತ್ತರ — ತ್ವದಾಜ್ಞಯಾ.

ಹೌದು. ಬೆಳಗಿನ ಜಾವ ಎದ್ದರೇ ನಮ್ಮ ಸ್ವಾಮಿ ಒಲಿಯುವದು. ಪರಮಾತ್ಮ ಹೇಳಿದಂತೆ ಬದುಕಿದರೇ ಭಗವಂತ ಒಲಿಯುವದು. ಕಾರಣ, ಅವು ಅವನೇ ಮಾಡಿದ ಆಜ್ಞೆಗಳು. **ಶೃತಿಸ್ಮೃತೀ ಹರೇರಾಜ್ಞೇ.**

ನಮಗೆ ಮೋಕ್ಷ ನೀಡಬೇಕು ಎನ್ನುವದು ಪರಮಾತ್ಮನಿಗೆ ಅಪೇಕ್ಷಿತ. ಅದಕ್ಕಾಗಿ ತನ್ನ ಸಾಕ್ಷಾತ್ಕಾರವನ್ನು ನಮಗೆ ನೀಡಬೇಕು. ಅವನು ನಮ್ಮ ಮನಸ್ಸಿನಲ್ಲಿ ಕಾಣಿಸಿಕೊಳ್ಳಬೇಕಾದರೆ ನಮ್ಮ ಮನಸ್ಸಿನಲ್ಲಿ ಕೊಳೆಯಿರಬಾರದು. ಈಗ ಕೊಳೆ ತುಂಬಿದೆ. ಆ ಕೊಳೆ ಕಳೆಯುವ ಶೋಧಕಗಳೇ ಈ ಧರ್ಮಗಳು. ಹೀಗಾಗಿ ಈ ಕರ್ಮಗಳನ್ನು ಮಾಡಿ ಎಂದು ಪರಮಾತ್ಮ ಆಜ್ಞೆ ಮಾಡಿದ್ದಾನೆ.

ಹೀಗಾಗಿ ಪ್ರತಿಯೊಂದು ಕರ್ಮ ಮಾಡುವಾಗಲೂ — ಅದು ಆಚಮನವಾಗಿರಲಿ, ದೇವರ ಪೂಜೆಯಾಗಿರಲಿ, ಶಾಸ್ತ್ರದ ವ್ಯಾಖ್ಯಾನವಾಗಿರಲಿ — ಇದು ದೇವರ ಆಜ್ಞೆ, ಇದು ನನ್ನ ಸ್ವಾಮಿ ನನಗಾಗಿ ಮಾಡಿರುವ ಆಜ್ಞೆ, ಇದು ನನ್ನ ಉದ್ಧಾರಕ್ಕಾಗಿ ನನ್ನೊಡೆಯ ಮಾಡಿರುವ

ಪ್ರೀತಿಯ ಆದೇಶ ಎಂಬ ಅನುಸಂಧಾನದೊಂದಿಗೆ ಮಾಡಬೇಕು.

## ತ್ವತ್ಪ್ರಸಾದಾತ್

ಇದೊಂದು ಅದ್ಭುತ ಅನುಸಂಧಾನ. ಶ್ರೀ ಕಾಶೀ ತಿಮ್ಮಣ್ಣಾಚಾರ್ಯರು ಈ ಪರಮಾತ್ಮನ ಪ್ರಸಾದ ಎನ್ನುವ ಮಾತನ್ನು ದಿವ್ಯವಾದ ಕ್ರಮದಲ್ಲಿ ನಮಗೆ ಮನದಟ್ಟು ಮಾಡಿಸಿದ್ದಾರೆ.

ಅಥಾಮ್ನಾತಂ ಯದ್ಯತ್ ಖಲು ತವ ದಯಾಸಾಧನತಯಾ
ವಿರಕ್ತಿರ್ಭಕ್ತಿರ್ಜ್ಞೇತ್ಯಖಿಲಮವಿನಾಭಾವಿ ದಯಯಾ ।
ಇತಿ ದ್ರಾಗನ್ಯೋನ್ಯಾಶ್ರಯಿಣಿ ಕರುಣಾಸಾಧನ ಧನೇ
ನ ಜಾನೇ ಶ್ರೀಜಾನೇ ಕೃತಿಷು ಕುರುಷೇ ಕೇನ ಕರುಣಾಮ್ ।।

ಪ್ರಶ್ನೆಯನ್ನೇ ಉತ್ತರವನ್ನಾಗಿ ನೀಡಿ ತತ್ವವನ್ನು ಅರ್ಥ ಮಾಡಿಸಿದ ಆಚಾರ್ಯರು ನಮ್ಮ ಶ್ರೀ ಕಾಶೀ ಆಚಾರ್ಯರು.

ದೇವರು ನಮ್ಮಲ್ಲಿ ದಯೆ ತೋರಬೇಕೆಂದರೆ ಜ್ಞಾನ, ಭಕ್ತಿ, ವೈರಾಗ್ಯಗಳು ಬೇಕು. ಇಲ್ಲದಿದ್ದರೆ ಸಾಧ್ಯವಿಲ್ಲ. ಆ ಜ್ಞಾನ ಭಕ್ತಿ ವೈರಾಗ್ಯಗಳು ನಮ್ಮಲ್ಲಿ

ಹೇಗೆ ಮೂಡುತ್ತವೆ? ದೇವರ ದಯೆಯಿದ್ದಾಗ ಮಾತ್ರ. ಬೀಜದಿಂದ ಮರ, ಮರದಿಂದ ಬೀಜ ಎನ್ನುವ ಕಗ್ಗಂಟನ್ನು ಪರಂಪರೆಯಿಂದ (ಹಿಂದಿನದು ಮುಂದಿನದಕ್ಕೆ ಕಾರಣ, ಮುಂದಿನದು ಅದರ ಮುಂದಿನದಕ್ಕೆ) ಎಂದು ಪರಿಹರಿಸುತ್ತಾರೆ. ಆದರೆ ಮೊಟ್ಟಮೊದಲು ಯಾವುದು? ಎಂಬ ಪ್ರಶ್ನೆಗೆ ಸಾಮಾನ್ಯರಲ್ಲಿ ಉತ್ತರವಿಲ್ಲ. (ಶಾಸ್ತ್ರ ತಿಳಿಸಿದ ಅರ್ಥವನ್ನು ಶ್ರೀ ಕನಕದಾಸರು ನೀಡಿದ್ದಾರೆ.)

ಇಲ್ಲಿ ಇನ್ನೂ ಕಗ್ಗಂಟು. ಜ್ಞಾನ ಭಕ್ತಿ ವೈರಾಗ್ಯಗಳು ಜೀವನ ಸ್ವಭಾವದಲ್ಲಿಯೇ ಇದೆ, ಅಂದಮೇಲೆ ಅವು ಹುಟ್ಟಲು ಸಾಧ್ಯವಿಲ್ಲ. ಹೀಗಾಗಿ ಅವೇ ಮೊದಲು, ಅವುಗಳಿಂದ ದೇವರ ದಯೆಯನ್ನು ಪಡೆಯಬೇಕು ಎಂದು ಅನೇಕ ವಿದ್ವಾಂಸರು ದಾರಿತಪ್ಪಿದ್ದುಂಟು. ಆದರೆ ವಸ್ತುಸ್ಥಿತಿ ಹೀಗಿಲ್ಲ.

ಆ ಸ್ವಭಾವ ಅಸ್ತಿತ್ವದಲ್ಲಿರಬೇಕಾದರೆ ಪರಮಾತ್ಮ ಇರಬೇಕು ತಾನೇ. ಬಿಂಬನಾದ ಪರಮಾತ್ಮ ಇದ್ದರೆ ಪ್ರತಿಬಿಂಬನಾದ ಜೀವ ಇರಲು ಸಾಧ್ಯ. ಹೀಗಾಗಿ ಜೀವನಿಗೆ ಬಿಂಬನಾಗಿ ಭಗವಂತ ಇರುವದೂ ಅವನ ಅನಂತ ಕಾರುಣ್ಯದ ಪ್ರತೀಕ. ಆದ್ದರಿಂದ

ಅವನ ಕಾರುಣ್ಯವೇ ಪ್ರಥಮ, ಉಳಿದದ್ದು ಅನಂತರ.

ಹೀಗೆ ನಮ್ಮ ಅಸ್ತಿತ್ವವೇ ಅವನ ಪ್ರಸಾದ. ಅನಂತ ಪಾಪಿಷ್ಠರಾದ ನಮಗೆ ಮನುಷ್ಯ ಜನ್ಮ ಬಂದಿರುವದೂ ಅವನ ಪ್ರಸಾದದಿಂದ. ಆ ಮನುಷ್ಯಜನ್ಮವೂ ಕಂಡಕಂಡ ಪ್ರದೇಶದಲ್ಲಿ ದೊರೆಯದೇ ಪವಿತ್ರ ಭರತಭೂಮಿಯಲ್ಲಿ ದೊರೆತಿದ್ದೂ ಅವನ ಪ್ರಸಾದದಿಂದ. ಈ ಭರತಭೂಮಿಯಲ್ಲಿ ಮನುಷ್ಯರಾಗಿ ಹುಟ್ಟಿ ಉಳಿದವರಂತೆ ವಿನಾಶವಾಗಿ ಹೋಗದೇ ಶಾಸ್ತ್ರತತ್ವಗಳ ಅನುಷ್ಠಾನವನ್ನು ಮಾಡುತ್ತಿರುವದೂ, ಆ ಶಾಸ್ತ್ರವನ್ನು ತಿಳಿಯಬೇಕು ಎಂದು ಪ್ರಯತ್ನ ಪಡುತ್ತಿರುವದೂ ಅವನ ಮಹಾಪ್ರಸಾದದ ಕುರುಹು.

ಹೀಗೆ ಅಸ್ತಿತ್ವದಿಂದ ಆರಂಭಿಸಿ ಆಸ್ತಿಕ್ಯಬುದ್ಧಿಯವರೆಗೆ ಎಲ್ಲವನ್ನೂ ನೀಡಿ, ದೇಹಕ್ಕೆ ಶಕ್ತಿಯನ್ನು ನೀಡಿ, ಕರ್ಮಾಚರಣೆಗೆ ಅನುಕೂಲವಾದ ಪರಿಸರವನ್ನು, ಪದಾರ್ಥಗಳನ್ನು ನೀಡಿ, ಕೆಲವು ಬಾರಿ ಅವು ಪ್ರತಿಕೂಲವಾಗಿದ್ದರೂ

ನಿಷ್ಠೆಯಿಂದ ಕರ್ಮಾಚರಣೆ ಮಾಡುವಂತೆ ಅನುಗ್ರಹಿಸುತ್ತಿರುವ ಪ್ರಸಾದವನ್ನು ಕರ್ಮಾಚರಣೆಗಿಂತ ಮುಂಚೆ, ಕರ್ಮಗಳನ್ನು ಆಚರಿಸುವಾಗ, ಕರ್ಮವನ್ನು ಮುಗಿಸಿ ಸಮರ್ಪಿಸುವಾಗ ಚಿಂತಿಸಬೇಕು ಎಂದು ಶ್ರೀರಾಘವೇಂದ್ರಸ್ವಾಮಿಗಳು ತಿಳಿಸಿದರು — ತ್ವತ್ಪ್ರಸಾದಾತ್.

## ತ್ವತ್ಪ್ರೇರಣಯಾ

ದೇವರು ಲಕ್ಷ್ಮೀ-ಪ್ರಾಣ-ದೇವತೆಗಳ ಮುಖಾಂತರ ನಮ್ಮನ್ನು ಪ್ರೇರಿಸಿ ಕರ್ಮಗಳನ್ನು ಮಾಡಿಸುತ್ತಾನೆ ಎಂಬ ತತ್ವವನ್ನು ಹಿಂದಿನ ಲೇಖನ-ಉಪನ್ಯಾಸಗಳಲ್ಲಿ ತಿಳಿದೆವು. ಆ ಚಿಂತನೆಯೂ ಕರ್ಮದ ಆದಿ ಮಧ್ಯ ಅಂತ್ಯಗಳಲ್ಲಿ ಅತ್ಯವಶ್ಯ — ತ್ವತ್ಪ್ರೇರಣಯಾ..

ಗಂಗೆಯ ಬಳಿಗೆ ಹೋಗಿರುತ್ತೇವೆ, ಗಂಗೆಯಲ್ಲಿ ಸ್ನಾನ ಮಾಡಿರುವದಿಲ್ಲ. ಗುರುಗಳ ಬಳಿಗೆ ಹೋಗುತ್ತೇವೆ, ಅವರಿಂದ ಉಪದೇಶ ಪಡೆಯುವದಿಲ್ಲ. ಮನೆಯಲ್ಲಿ ಸಾಲಿಗ್ರಾಮ ಪ್ರತಿಮೆಗಳಿರುತ್ತವೆ ಪೂಜೆ

ಮಾಡುವದಿಲ್ಲ. ಸಮಯ ಸಾಕಷ್ಟಿರುತ್ತದೆ, ಅಥವಾ ವ್ಯರ್ಥ ವಿಷಯಗಳಿಗಾಗಿ ವ್ಯಯಿಸುತ್ತೇವೆ ಆದರೆ ವಿಹಿತ ಕರ್ಮಗಳ ಅನುಷ್ಠಾನ ಮಾಡುವದಿಲ್ಲ. ಬಚ್ಚಲು ಮನೆಯಲ್ಲಿ ಅರ್ಧಗಂಟೆ ಹಾಡು ಹೇಳುತ್ತ ಸ್ನಾನ ಮಾಡುತ್ತೇವೆ, ದೇವರಿಗಿದು ಅಭಿಷೇಕ ಎಂಬ ಚಿಂತನೆ ಮೂಡುವದಿಲ್ಲ. ಯಾಕೆ? ಒಂದೇ ಉತ್ತರ. ಒಳಗೆ ನಿಂತ ಅಂತರ್ಯಾಮಿ ನಮ್ಮನ್ನು ಆ ರೀತಿ ಪ್ರೇರಿಸುತ್ತಿಲ್ಲ.

ಹೀಗಾಗಿ ಒಂದು ಸತ್ಕರ್ಮ ನಮ್ಮಿಂದ ಜರುಗುತ್ತಿದೆ ಎಂದಾದಲ್ಲಿ ಆ ಕರ್ಮದ ಆದಿಮಧ್ಯಾಂತಗಳಲ್ಲಿ ಶ್ರೀಹರಿಯ ಈ ಪ್ರೇರಣೆಯ ಕಾರುಣ್ಯವನ್ನು ನೆನೆಸಬೇಕು. “ಸ್ವಾಮಿ ನಿನ್ನ ಪ್ರೇರಣೆಯಿಂದಲೇ ಈ ಸತ್ಕರ್ಮವನ್ನು ಮಾಡುತ್ತಿದ್ದೇನೆ, ಮುಂದೆಯೂ ಹೀಗೆಯೇ ನಿರಂತರವಾಗಿ ಮಾಡಿಸು” ಎಂದು ಭಕ್ತಿಯಿಂದ ಪ್ರಾರ್ಥಿಸಬೇಕು.

ಇನ್ನು ಮುಂದಿನ ತ್ವತ್ಪ್ರೀತ್ಯರ್ಥಂ ಎನ್ನುವದು ಮತ್ತೊಂದು ಪರಮಾದ್ಭುತವಾದ ಅನುಸಂಧಾನ. ಟೀಕಾಕೃತ್ಪಾದರು ನಮ್ಮ ಮೇಲಿನ ಅನಂತ ಅನುಗ್ರಹದಿಂದ ತಿಳಿಸಿದ ತತ್ವ. ಟೀಕಾಕೃತ್ಪಾದರ

ವಚನ, ಆ ವಚನದ ಮಾಧುರ್ಯ, ಗಾಂಭೀರ್ಯಗಳನ್ನು ಶ್ರೀ ವಿದ್ಯಾಧಿರಾಜತೀರ್ಥಶ್ರೀಪಾದಂಗಳವರು ಮತ್ತು ಶ್ರೀ ರಾಘವೇಂದ್ರಗುರುಸಾರ್ವಭೌಮರು ವಿಶದೀಕರಿಸುವ ಬಗೆಯನ್ನು ಗುರ್ವನುಗ್ರಹದಿಂದ ಮುಂದಿನ ಲೇಖನ ಉಪನ್ಯಾಸಗಳಲ್ಲಿ ತಿಳಿಯೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491